ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.

ಪಾಟಿ ಸವಾಲುಃ ಶ್ರೀ ಡಿಸಿಡಿ ವಕೀಲರಿಂದ

೧ ನೇ ಆರೋಪಿತ ನಮ್ಮ ಸಂಸ್ಥೆಯಲ್ಲಿ ೧೯೯೮ ರಿಂದ ಕೆಲಸ ಮಾಡುತ್ತಿದ್ದ. ನಾನೂ ಕೂಡಾ ೨೦ ವರ್ಷಗಳಿಂದ ಸದರಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೆ. ೧೯೯೮ ರಿಂದ ೨೦೧೨ ರವರೆಗೆ ೧ ನೇ ಆರೋಪಿತ ಅಟೆಂಡರ್ ಆಗಿ ಕೆಲಸ ಮಾಡುತ್ತಿದ್ದ. ನಂತರ ೨೦೧೨ ರಿಂದ ಗೋದಾಮಿನ ಪೂರ್ತಿ ಜವಾಬ್ದಾರಿ ಕೆಲಸವನ್ನು ನಿರ್ವಹಿಸುತ್ತಿದ್ದ. ನಮ್ಮ ಸಂಸ್ಥೆಯಲ್ಲಿ ಒಟ್ಟು ೬ ಗೋದಾಮುಗಳು ಇವೆ. ೪ ಗೋದಾಮುಗಳಲ್ಲಿ ಕರಿಮೆಣಸನ್ನು ಮತ್ತು ೨ ಗೋದಾಮುಗಳಲ್ಲಿ ರಸಗೊಬ್ಬರವನ್ನು ಶೇಖರಣೆ ಮಾಡಿ ಇಡುತ್ತಿದ್ದೆವು. ಗೋದಾಮಿನ ಮೇಲ್ಛಾವಣಿಯ ಮಹಡಿಯ ಮೇಲೆ ೨ ವಸತಿಗೃಹಗಳು ಇರುತ್ತದೆ. ಒಂದು ವಸತಿಗೃಹದಲ್ಲಿ ನಾನು ಮತ್ತು ಇನ್ನೊಂದರಲ್ಲಿ ನಗದು ಗುಮಾಸ್ತರು ಇರುತ್ತಾರೆ. ಗೋದಾಮುಗಳ ಶಟರ್ ಬೆಃ ೯-೦೦ ಗಂಟೆಗೆ ತೆರೆಯುತೇವೆ ಮತ್ತು ಸಂಜೆಃ ೬ ಗಂಟೆಗೆ ಮುಚ್ಚುತೇವೆ. ಸಾಮಾನ್ಯವಾಗಿ ಯಾವುದೇ ವಾಹನಗಳು ಗೋದಾಮಿಗೆ ಬರಬೇಕಾದರೆ ಒಂದು ಬೀಗ ಇರುವ ಗೇಟಿನ ಮುಖಾಂತರ ಹಾದು ಬರಬೇಕು ಎಂದರೆ ಸರಿ. ಗೋದಾಮಿನ ಸಂಪೂರ್ಣ ಜವಾಬ್ದಾರಿ ನಾನು ನೋಡಿಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ಗೋದಾಮಿನ ಜವಾಬ್ದಾರಿಯನ್ನು ನಾನು ಮತ್ತು ೧ ನೇ ಆರೋಪಿತ ಜಂಟಿಯಾಗಿ ನೋಡಿಕೊಳ್ಳುತ್ತಿದ್ದೆವು. ಸಂಘದ ಕಚೇರಿಯಲ್ಲಿದ್ದ ಬೀಗಗಳನ್ನು ೧ ನೇ ಆರೋಪಿತನೇ ಪಡೆದು ಗೋದಾಮಿನ ಬಾಗಿಲುಗಳನ್ನು ತೆರೆಯುತ್ತಿದ್ದನು. ಬೀಗಗಳು ನನ್ನ ಕೊಠಡಿಯ ಡ್ರಾಯರ್‌ನಲ್ಲಿ ಇರುತ್ತಿದ್ದವು. ನನ್ನ ಕೊಠಡಿಗೆ ಬೀಗ ಇರುವುದಿಲ್ಲ. ಗೋದಾಮುಗಳ ಬೀಗಗಳನ್ನು ಹಾಕಿ ಎಲ್ಲಾ ಬೀಗಗಳನ್ನು ನನ್ನ ಕೊಠಡಿಯ ಡ್ರಾಯರ್‌ನಲ್ಲಿ ಇಡುತ್ತಿದ್ದರು ಎಂದರೆ ಸರಿ.

ನಮ್ಮ ಸಂಸ್ಥೆಯಲ್ಲಿ ಪ್ರತಿ ವರ್ಷ ವಾರ್ಷಿಕ ಸಭೆಯಾಗುತ್ತದೆ. ೨೦೧೬ ಮತ್ತು ೨೦೧೭ ರಲ್ಲಿ ಕೂಡಾ ಸಭೆ ನಡೆದಿದೆ. ನಿಡಿ-೧ಎ ರೀತಿ ನಮ್ಮ ಸಭೆಯಲ್ಲಿ ತೀರ್ಮಾನವಾಗಿರುತ್ತದೆ ಎಂದರೆ ನಿಜ. ೧ ನೇ ಆರೋಪಿತ ನಮ್ಮ ಸಂಸ್ಥೆಯಲ್ಲಿ ಇಡಲಾದ ೧೦೪ ಚೀಲ ಕರಮೆಣಸನ್ನು ಕದ್ದು ಮಾರಾಟ ಮಾಡಿರುತ್ತಾನೆ ಎಂದು ಆರೋಪ ಇದೆ. ಆರೋಪಿ ಯಾವ ದಿನ ಕಳ್ಳತನ ಮಾಡಿರುತ್ತಾನೆ ನಿಖರ ದಿನ ನೆನಪಿಲ್ಲ. ದಿಃ ೩.೩.೨೦೧೭ ಕ್ಕೆ ಸಿ ಕೆ ಬಶೀರ್ ಹಾಜಿ ಮತ್ತು ಶಿವ ಎನ್ನುವವರು ತಮ್ಮ ದಾಸ್ತಾನಿನ ರಶೀತಿಗಳನ್ನು ಹಾಜರುಪಡಿಸಿದ ಮೇರೆ ನನಗೆ ಸದರಿ ಕಳ್ಳತನವಾದ ವಿಚಾರ

ಗೊತ್ತಾಯಿತು. ರಶೀತಿ ಪಡೆದು ಗೋದಾಮಿನ ಒಳಗೆ ಪ್ರವೇಶ ಮಾಡಿ ಸದರಿಯವರ ಲಾಟಿನಲ್ಲಿ ನೋಡಲಾಗಿ ಕರಿಮೆಣಸು ಕಳ್ಳತನವಾಗಿರುವುದು ಗೊತ್ತಾಯಿತು. ಸ್ಪಷ್ಟವಾಗಿ ಕಳ್ಳತನವಾದ ವಿಚಾರ ನನಗೆ ಗೊತ್ತಾಗಿದ್ದು ದಿಃ ೩.೩.೨೦೧೭ ಮತ್ತು ಅದೇ ದಿನ ನಮ್ಮ ಅಧ್ಯಕ್ಷರಿಗೆ ತಿಳಿಸಿರುತೇನೆ.

ಪ್ರತೀತಿಂಗಳ ಕೊನೆಯ ದಿನ ೧ ನೇ ಆರೋಪಿತ ಮತ್ತು ನಾನು ಗೋದಾಮಿನಲ್ಲಿರುವ ದಾಸ್ತಾನುಗಳನ್ನು ಪರಿಶೀಲಿಸಿ ಸಂಸ್ಥೆಗೆ ವರದಿ ತಯಾರು ಮಾಡಿ ಸಹಿ ಮಾಡಿ ಸಲ್ಲಿಸುತೇವೆ ಎಂದರೆ ಸರಿ. ದಿಃ ೨೮.೨.೨೦೧೭ ಕ್ಕೆ ಪ್ರತೀ ತಿಂಗಳಿನಂತೆ ನಾನು, ೧ ನೇ ಆರೋಪಿತ ಮತ್ತು ನಿರ್ದೇಶಕರು ಗೋದಾಮಿನಲ್ಲಿರುವ ದಾಸ್ತಾನುಗಳನ್ನು ಪರಿಶೀಲಿಸಿ ವರದಿ ಸಲ್ಲಿಸಿರುತೇವೆ ಎಂದರೆ ಸರಿ. ದಿಃ ೧.೩.೨೦೧೭ ಕ್ಕೆ ನಮ್ಮ ಸಂಸ್ಥೆಗೆ ಮತ್ತು ಗೋದಾಮಿಗೆ ವಾರದ ರಜೆ ಎಂದರೆ ಸರಿ. ದಿಃ ೨.೩.೨೦೧೭ ಕ್ಕೆ ೧ ನೇ ಆರೋಪಿತ ರಜೆಯ ಮೇಲೆ ಇದ್ದ ಎಂದರೆ ಸರಿ. ದಿಃ ೩.೩.೨೦೧೭ ಕ್ಕೆ ಕೂಡಾ ಸದರಿಯವನು ರಜೆಯಲ್ಲಿ ಇದ್ದ ಎಂದರೆ ಸರಿ. ದಿಃ ೨೮.೨.೨೦೧೭ ಕ್ಕೆ ೬೫೮ ಚೀಲ ರಸಗೊಬ್ಬರ ಕಾಣೆಯಾದ ವಿಚಾರ ನನ್ನ ಗಮನಕ್ಕೆ ಇತ್ತು. ದಿಃ ೩.೩.೨೦೧೭ ಕ್ಕೆ ಸಾಕ್ಷಿ ಮುಂದುವರಿದು ರಸಗೊಬ್ಬರ ಕಾಣೆಯಾದ ವಿಚಾರ ನನ್ನ ಗಮನಕ್ಕೆ ಇರಲಿಲ್ಲ ಎಂದು ನುಡಿಯುತ್ತಾರೆ. ನನ್ನ ಗಮನಕ್ಕೆ ಸದರಿ ವಿಚಾರ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ೨೦೧೭ ರ ವಾರ್ಷಿಕ ಲೆಕ್ಕ ಮಾಡುವಾಗ ಅಂದರೆ ಮಾರ್ಚ್ ಕೊನೆಯ ವಾರದಲ್ಲಿ ರಸಗೊಬ್ಬರ ಕಾಣೆಯಾದ ವಿಚಾರ ಗೊತ್ತಾಯಿತು. ಅದೇ ದಿನ ೬೫೮ ಚೀಲ ಎಂದು ಸ್ಪಷ್ಟವಾಗಿ ಕಾಣೆಯಾಗಿದೆ ಎಂದು ಗೊತ್ತಾಯಿತು. ಗೊಬ್ಬರದ ಕಾಣೆಯಾದ ವಿಚಾರದ ಬಗ್ಗೆ ನಾನಾಗಲೀ ಅಥವಾ ಮಂಡಳಿಯವರಾಗಲೀ ಪೋಲೀಸ್ ದೂರನ್ನು ನೀಡಿಲ್ಲ. ಸದರಿ ಗೊಬ್ಬರದ ಮೊತ್ತ ೫ ಲಕ್ಷದ ೮ ಸಾವಿರ ಆಗುತ್ತದೆ. ನಾನೇ ಸದರಿ ಗೊಬ್ಬರನ್ನು ದುರುಪಯೋಗ ಪಡಿಸಿಕೊಂಡ ಕಾರಣ ದೂರು ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ಸುಪರ್ದಿಯಲ್ಲಿದ್ದ ಬೀಗಗಳನ್ನು ಬಳಸಿಕೊಂಡು ಸದರಿ ದಾಸ್ತಾನುಗಳನ್ನು ದುರುಪಯೋಗ ಪಡಿಸಿಕೊಂಡ ಕಾರಣ ದೂರು ನೀಡಿಲ್ಲ ಎಂದರೆ ಸರಿಯಲ್ಲ.

ಗೊಬ್ಬರ ಕಾಣೆಯಾದ ವಿಚಾರವಾಗಿ ನನಗೆ ವೈಯುಕ್ತಿಕವಾಗಿ ದೂರು ನೀಡುವ ವಿಚಾರ ಮನಸ್ಸಿಗೆ ಬಂದಿತ್ತು. ಗೊಬ್ಬರ ಕಾಣೆಯಾದ ಜವಾಬ್ದಾರಿ ನನ್ನ ಮೇಲೆ ಬರುತ್ತದೆ ಎನ್ನುವ ವಿಚಾರ ನನಗೆ ಮನಸ್ಸಿಗೆ ಬಂದಿರಲಿಲ್ಲ. ದಿಃ ೩.೩.೨೦೧೭ ಕ್ಕೆ ಗೊಬ್ಬರ ಕಾಣೆಯಾದ ವಿಚಾರವಾಗಿ ಪೋಲೀಸರಿಗೆ ಯಾವುದೇ ದೂರನ್ನು ನೀಡಿಲ್ಲ. ಆಗಿನ ಮಾರುಕಟ್ಟೆ ಬೆಲೆಯ ಪ್ರಕಾರ ಕಾಣೆಯಾದ ಕರಿಮೆಣಸಿನ ಮೊತ್ತ ೫೮ ಲಕ್ಷ ಆಗುತ್ತದೆ. ಎಲ್ಲಾ ೫೮ ಲಕ್ಷ ಮೊತ್ತದ ಕರಿಮೆಣಸು ಬಶೀರ್ ಮತ್ತು ಶಿವ ಎನ್ನುವವರಿಗೆ ಸೇರಿದ್ದಾಗಿರುತ್ತದೆ. ಸದರಿಯವರು ಅಂದರೆ ಚಾಸಾ-೬ ಮತ್ತು ೮ ಕೂಡಾ ಪೋಲೀಸರಿಗೆ ಯಾವುದೇ ದೂರು ನೀಡಿಲ್ಲ. ದಿಃ ೬.೩.೨೦೧೭ ಕ್ಕೆ ಚಾಸಾ-೬ ಮತ್ತು ೮ ಬರವಣಿಗೆಯಲ್ಲಿ ನಮ್ಮ ಸಂಘಕ್ಕೆ ಕರಿಮೆಣಸನ್ನು ಕಾಣೆಯಾದ ಬಗ್ಗೆ ೧ ದೂರನ್ನು ಸಲ್ಲಿಸಿದ್ದರು. ಸದರಿ ದೂರಿನಲ್ಲಿ ಕಾಣೆಯಾದ ಕರಿಮೆಣಸು ಎಷ್ಟು ತೂಕದಿತ್ತು ಮತ್ತು ಎಷ್ಟು ಮೌಲ್ಯದಿತ್ತು ಎಂಬ

ವಿಷಯವನ್ನು ತಿಳಿಸಿದ್ದಾರೆ. ಚಾಸಾ-೬ ಮತ್ತು ೮ ದಿಃ ೬.೩.೨೦೧೭ ಕ್ಕೆ ನಮಗೆ ದೂರು ನೀಡಿದ ನಂತರವೂ ಸಹ ನಾವು ಯಾವುದೇ ದೂರನ್ನು ನೀಡಿಲ್ಲ. ದಿಃ ೨.೩.೨೦೧೭ ರಿಂದ ೧ ನೇ ಆರೋಪಿತ ನಮ್ಮ ಗೋದಾಮಿಗೆ ಬೇಟಿ ನೀಡಲೇ ಇಲ್ಲ. ಕಾಣೆಯಾದ ಎಲ್ಲಾ ಕರಿಮೆಣಸನ್ನು ನಾನು, ಚಾಸಾ-೧ ಮತ್ತು ನಮ್ಮ ಸಂಸ್ಥೆಯವರು ದುರುಪಯೋಗಪಡಿಸಿಕೊಂಡು ೧ ಸುಳ್ಳು ದೂರನ್ನು ನೀಡಿರುತೇವೆ ಎಂದರೆ ಸರಿಯಲ್ಲ. ಪೋಲೀಸರು ೧೦೪ ಚೀಲ ಕರಿಮೆಣಸನ್ನು ಚೆನ್ನಯ್ಯನಕೋಟೆಯಲ್ಲಿರುವ ರಶೀದ್ ಎನ್ನುವವರ ಗೋದಾಮಿನಿಂದ ವಶಕ್ಕೆ ಪಡೆದಿದ್ದಾರೆ ಎಂದರೆ ಸರಿ. ಸದರಿ ೧೦೪ ಚೀಲ ಮೆಣಸು ನಮಾಸ್ಕೋ ಟ್ರೇಡರ್ಸ್ ಎಂಬ ೨ ನೇ ಆರೋಪಿತನ ಸಂಸ್ಥೆಗೆ ಸೇರಿದ್ದು ಎಂದರೆ ನನಗೆ ಗೊತ್ತಿಲ್ಲ. ೨ ನೇ ಆರೋಪಿತನಿಗೆ ನಮಾಸ್ಕೋ ಟ್ರೇಡರ್ಸ್ ಎಂಬ ಕರಿಮೆಣಸು ಹೊಂದುವ ಸಂಸ್ಥೆ ಇದೆ ಎಂದರೆ ಇರಬಹುದು. ಸದರಿ ಸಂಸ್ಥೆಯು ಸಿದ್ದಾಪುರದ ಸುತ್ತ ಮುತ್ತಲಿನ ರೈತರಿಂದ ದಾಸ್ತಾನುಗಳನ್ನು ಪಡೆದು ಕೋಟಿಗಟ್ಟಲೆ ವ್ಯವಹಾರ ನಡೆಸುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಸುಮಾರು ೨-೩ ವರ್ಷಗಳಿಂದ ನಮಾಸ್ಕೋ ಟ್ರೇಡರ್ಸ್‌ರವರು ಕೂಡಾ ನಮ್ಮ ಸಂಸ್ಥೆಯ ಗ್ರಾಹಕರು ಎಂದರೆ ಸರಿ. ೨ ನೇ ಆರೋಪಿತನ ಸಂಸ್ಥೆ ಒಂದು ಪ್ರತಿಷ್ಟಿತ ಸಂಸ್ಥೆ ಎಂದರೆ ಗೊತ್ತಿಲ್ಲ. ೨ ನೇ ಆರೋಪಿತನ ಸಂಸ್ಥೆ ನಮ್ಮೊಂದಿಗೆ ನಂಬಿಕಸ್ತರಾಗಿದ್ದರು ಎಂದರೆ ಸರಿ.

೨೦೦೪ ರಲ್ಲಿ ೧ ನೇ ಆರೋಪಿತನ ಮೇಲೆ ಪಡಿತರ ಸಾಮಾಗ್ರಿಗಳಾದ ಅಕ್ಕಿ, ಗೋಧಿ, ಸೀಮೆಎಣ್ಣೆ ದುರುಪಯೋಗಪಡಿಸಿಕೊಂಡ ಆರೋಪ ಇತ್ತು. ಸದರಿ ಸಾಮಾಗ್ರಿಯ ಮೊತ್ತ ನನಗೆ ಗೊತ್ತಿಲ್ಲ. ಸದರಿ ಪಡಿತರ ಸಾಮಾಗ್ರಿಯನ್ನು ೨೦೦೫ ರಲ್ಲಿ ಕೂಡಾ ದುರುಪಯೋಗ ಪಡಿಸಿಕೊಂಡ ಆರೋಪ ಇತ್ತು. ಆ ಸಮಯದಲ್ಲಿ ಆತನಿಂದ ೧ ಮುಚ್ಚಳಿಕೆಯನ್ನು ಕೂಡಾ ಬರೆಯಿಸಿಕೊಂಡಿದ್ದೆವು. ಆ ಸಮಯದಲ್ಲಿ ಪೋಲೀಸರಿಗೆ ೧ ನೇ ಆರೋಪಿತನ ವಿರುದ್ದ ಯಾವುದೇ ದೂರನ್ನು ನೀಡಿಲ್ಲ. ಸಾರ್ವಜನಿಕರು ಕೂಡಾ ಲಿಖಿತವಾಗಿ ಯಾವುದೇ ದೂರನ್ನು ನೀಡಿಲ್ಲ. ೨೦೦೪ ಮತ್ತು ೨೦೦೫ ರಲ್ಲಿ ಆದ ದುರುಪಯೋಗದ ವಿಚಾರ ಈ ಪ್ರಕರಣದಲ್ಲಿ ಪೋಲೀಸರಿಗೆ ನಾನು ಹೇಳಿಕೆಯಲ್ಲಿ ತಿಳಿಸಿಲ್ಲ. ೨೦೦೪ ಮತ್ತು ೨೦೦೫ ರಲ್ಲಾಗಲೀ ಮತ್ತು ೨೦೧೭ ರಲ್ಲಾಗಲೀ ೧ ನೇ ಆರೋಪಿತ ಯಾವುದೇ ಸಾಮಾಗ್ರಿಗಳನ್ನು ದುರುಪಯೋಗ ಪಡಿಸಿಲ್ಲ ಎಂದರೆ ಸರಿಯಲ್ಲ. ೨೦೧೬ ಮತ್ತು ೨೦೧೭ ರ ವಾರ್ಷಿಕ ಸಭೆಯಲ್ಲಿ ದುರುಪಯೋಗವಾದ ಮೊತ್ತವನ್ನು ೧ ನೇ ಆರೋಪಿತ ಮತ್ತು ನನ್ನಿಂದ ವಸೂಲಾತಿ ಮಾಡಬೇಕು ಎಂದು ತೀರ್ಮಾನವಾಗಿದೆ ಎಂದರೆ ಸರಿ. ಸದರಿ ಆರೋಪದಿಂದ ಪಾರಾಗಲು ನಾನು ೧ ನೇ ಆರೋಪಿತನ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಸಂಸ್ಥೆಯವರು ಸುಳ್ಳು ದೂರನ್ನು ದಾಖಲಿಸಿದ್ದು ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವರದಿ ಪ್ರಕಾರ ನಷ್ಟ ಭರಿಸಲು ನಾನು ತಯಾರಿಲ್ಲ. ಕರಿಮೆಣಸು ಮತ್ತು ಗೊಬ್ಬರ ಕಾಣೆಯಾಗಿದ್ದಕ್ಕೆ ಸಂಪೂರ್ಣ ಜವಾಬ್ದಾರಿ ನನ್ನದು ಎಂದರೆ ಸರಿಯಲ್ಲ. ಇಲ್ಲಿಯವರೆಗೂ ನಾನು ರಸಗೊಬ್ಬರದ ವಿಚಾರವಾಗಿ ಪೋಲೀಸರಿಗೆ ದೂರು ನೀಡಿಲ್ಲ ಎಂದರೆ ಸಾಕ್ಷಿಯು ಸಹಕಾರಿ ಸಂಘದಲ್ಲಿ ವಸೂಲಾತಿ ಕ್ರಮ ಜಾರಿಯಲ್ಲಿದೆ ಎಂದು ನುಡಿಯುತ್ತಾರೆ. ಕರಿಮೆಣಸು ಕಾಣೆಯಾಗಿದೆ ರಸಗೊಬ್ಬರ ದುರುಪಯೋಗವಾಗಿದೆ ಆ ಕಾರಣದಿಂದ

ಕಾಣೆಯಾದ ಕರಿಮೆಣಸಿನ ವಿಚಾರ ಮಾತ್ರ ದೂರು ನೀಡಿದ್ದೇವೆ. ಸುಮಾರು ೧೦ ಜನ ಕೂಲಿಗಳು ೧೦ಳ ಚೀಲಗಳನ್ನು ಅರ್ಧ ಗಂಟೆಯಲ್ಲಿ ೧ ವಾಹನಕ್ಕೆ ತುಂಬಿಸಬಹುದು. ಕಚೇರಿ ಸಮಯದಲ್ಲಿ ಸದರಿ ೧೦ ಜನ ಕರಿಮೆಣಸನ್ನು ವಾಹನಕ್ಕೆ ತುಂಬುವುದನ್ನು ನಾನು ನೋಡಿಲ್ಲ.

ಮರು ವಿಚಾರಣೆಃ ಇಲ್ಲ.

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿಃ XXX

(ಶಿವಾನಂದ್ ಲಕ್ಷ್ಮಣ್ ಅಂಚಿ)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,

ವಿರಾಜಪೇಟೆ